**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 14 ಪ್ರಾ.ಸಾ. : 7**

ಸಾಕ್ಷಿಯ ಹೆಸರು : ಕರೆಹನುಮೆಗೌಡಾ
ತಂದೆಯ ಹೆಸರು : ನರಸಿಂಮೆಗೌಡಾ
ವಯಸ್ಸು : 73 ವರ್ಷ
ಉದ್ಯೋಗ : ನಿವೃತ್ತ ಉಪ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ
ವಾಸ : ಶಿರಾ , ತುಮಕೂರು ಜಿಲ್ಲೆ

**ದಿನಾಂಕಃ 14-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾರವಾರದ ಕರ್ನಾಟಕ ಭೂಸೇನಾ ನಿಗಮದಲ್ಲಿ 1995 ರಿಂದ 1998 ರವರೆಗೆ ಸಹಾಯಕ ಉಪ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಮತ್ತು ನಂತರ ಅದೇ ಕಚೇರಿಯಲ್ಲಿ ಪದೋನ್ನತಿ ಹೊಂದಿ ಉಪ ನಿರ್ದೇಶಕನಾಗಿ 2004 ರವರೆಗೆ ಮುಂದುವರಿದು ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ದಾವಣಗೆರೆಗೆ ವರ್ಗಾವಣೆಯಾಗಿ ಹೋಗಿರುತ್ತೇನೆ. ನಾನು 2005 ರಲ್ಲಿ ದಾವಣಗೆರೆಯಲ್ಲಿ ಕರ್ನಾಟಕ ಭೂಸೇನಾ ನಿಗಮದಲ್ಲಿ ಉಪ ನಿರ್ದೇಶಕನಾಗಿ ಕೆಲಸ ನಿರ್ವಹಿಸಿರುತ್ತೇನೆ. 2001-02 ನೇ ಸಾಲಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಸ್ವಚ್ಛ ಗ್ರಾಮ ಯೋಜನೆ ಮಂಜೂರಿ ಆಗಿರುತ್ತದೆ . ಆ ಯೋಜನೆಗೆ ನಮ್ಮ ಇಲಾಖೆ ನೋಡಲ್ ಏಜೆಂನ್ಸಿ ಆಗಿತ್ತು. ಸಿದ್ದಾಪುರದ ಕಾನಗೋಡು ಗ್ರಾಮ ಪಂಚಾಯತಿಗೆ ಆ ಯೋಜನೆಯಡಿಯಲ್ಲಿ ರೂ. 20,00,000/- ಮಂಜೂರಾಗಿತ್ತು . ಪ್ರತಿ ಗ್ರಾಮ ಪಂಚಾಯತಿಗೆ ರೂ. 20,00,000/-ವೇ ಮಂಜೂರಾಗಿತ್ತು. ಅನುಷ್ಠಾನಾಧಿಕಾರಿಯಾಗಿ ಸಿದ್ದಾಪುರ ತಾಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ತವ್ಯ ನಿರ್ವಹಿಸುತ್ತಿದ್ದರು. ಕಾನಗೋಡು ಗ್ರಾಮ ಪಂಚಾಯತಿಗೆ ಮಂಜೂರಾಗಿದ್ದ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಸದರಿ ಗ್ರಾಮ ಪಂಚಾಯತಿಯವರು ವರದಿಯನ್ನು ಸಿದ್ದಾಪುರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗಕ್ಕೆ ಸಲ್ಲಿಸಿದ್ದು ಅದರ ಆಧಾರದ

ಮೇಲೆ ಸದರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನಮ್ಮ ನಿಗಮದ ಸಹಾಯಕ ನಿರ್ದೇಶಕರು ವ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸ್ವಚ್ಛ ಗ್ರಾಮ ಅನುಷ್ಟಾನ ಸಮಿತಿಯವರುರ ಜಂಟಿಯಾಗಿ ಆ ಕಾಮಗಾರಿಗಳು ನಿರ್ವಹಣೆ ಆಗಿರುವ ಬಗ್ಗೆ ಪರಿವೀಕ್ಷಣೆ ಮಾಡಿ ನನಗೆ ಸಲ್ಲಿಸಿದ್ದರು . ನಾನು ಅದನ್ನು ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಿ ಅವರಿಂದ ಅನುಮತಿ ಪಡೆದು ಅವರು ಸಲ್ಲಿಸಿದ್ದ ಬಿಲ್ಲುಗಳ ಹಣವನ್ನು ಬಿಡುಗಡೆ ಮಾಡಿರುತ್ತೇನೆ. ಆ ಹಣ ಚೆಕ್ ಮೂಲಕ ಪಾವತಿ ಮಾಡಿರುತ್ತೇನೆ. ಅದನ್ನು ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿರವರ ಜಂಟಿ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ</u>**

2. ನಾನು ಚೆಕ್ಕುಗಳನ್ನು ಬಿಡುಗಡೆ ಮಾಡಿದ ಬಗ್ಗೆ ತನಿಖಾಧಿಕಾರಿಗೆ ದಾಖಲಾತಿ ಕೊಟ್ಟಿಲ್ಲ. ನಾನು ವರ್ಗಾವಣೆಯಾಗಿ ದಾವಣಗೆರೆಗೆ ಹೋದ ನಂತರ ನನ್ನ ಮುಂದಿನ ಅಧಿಕಾರಿ ನೀಡಿರಬಹುದು . ಜಂಟಿ ತಪಾಸಣೆ ಮಾಡಿ ವರದಿ ಸಲ್ಲಿಸದ ಹೊರತು ಯಾವುದೇ ಬಿಲ್ಲನ್ನು ಮಂಜೂರು ಮಾಡಲು ಬರುವುದಿಲ್ಲ ಎಂದರೆ ಹೌದು . ನಿ.ಪಿ. 47 ರ ಪ್ರಕಾರ ಜಂಟಿ ತಪಾಸಣೆ ಮಾಡಬೇಕಾಗಿರುತ್ತದೆ ಎಂದರೆ ಹೌದು ಆದರೆ ನಿ.ಪಿ. 47 ರಲ್ಲಿ ನನ್ನ ರುಜು ಇರುವುದಿಲ್ಲ. ಜಂಟಿ ತಪಾಸಣೆ ವರದಿ ಇಲ್ಲದೇ ಹೋದರೆ ಬಿಲ್ಲನ್ನು ಮಂಜೂರು ಮಾಡುವುದಿಲ್ಲ. ನಮ್ಮ ಭೂಸೇನಾ ನಿಗಮದಿಂದ ಸಹಾಯಕ ನಿರ್ದೇಶಕರು ಸ್ವಚ್ಛ ಗ್ರಾಮ ಯೋಜನೆ ಅನುಷ್ಠಾನ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ . ಅವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹ ಆಗಿರುತ್ತಾರೆ. ಆ ಸಮಿತಿಯವರು ಮತ್ತು ಜಂಟಿ ತಪಾಸಣೆ ಮಾಡುವ ಇತರ ಅಧಿಕಾರಿಗಳು ಕಾಮಗಾರಿ ಸಂಪೂರ್ಣವಾಗಿ ಅನುಷ್ಠಾನ ಆಗಿದೆಯಾ ಎಂದು ಖುದ್ದಾಗಿ ಪರಿಶೀಲನೆ ಮಾಡಿಯೇ ವರದಿ ಕೊಡಬೇಕಾಗಿರುತ್ತದೆ ಎಂದರೆ ಹೌದು . ಆ ರೀತಿ ಚೆಕ್ಕುಗಳ ಬಿಡುಗಡೆ ಮಾಡಿದ್ದೇನೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ